ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಕ.ರಾ ರ.ಸಾ. ಸಂಸ್ಥೆಯ ನಿಲ್ದಾಣಗಳಲ್ಲಿ ಘೋಷಕರ ನೇಮಕ

೨೩೬. ಶ್ರೀ ಜಿ. ಎಸ್. ಶಿವನಂಜಪ್ಪ. (ಗುಬ್ಬಿ).—ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಮತ್ತು ಸಾರಿಗೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ ನಿಲ್ದಾಣಗಳಲ್ಲಿ ಅನೌನ್ಸರ್ (ಘೋಷಕ)ಗಳನ್ನು ನೇಮಕ ಮಾಡಲಾಗಿದೆಯೇ?

ಆ) ಈ ಹುದ್ದೆಗಳನ್ನು ಕಾಯಂ ಹುದ್ದೆಗಳೆಂದು ಪರಿಗಣಿಸಲಾಗಿದೆಯೇ?

ಇ) ಇಲ್ಲದಿದ್ದಲ್ಲಿ ಈ ಹುದ್ದೆಗಳನ್ನು ಕಾಯಂ ಮಾಡಲಾಗುವುದೇ?

ಶ್ರೀ ಕೆ. ಜೆ. ಜಾರ್ಜ್ (ಆಹಾರ ಮತ್ತು ನಾಗರೀಕ ಸರಬರಾಜು ಮತ್ತು ಸಾರಿಗೆ ರಾಜ್ಯ ಮಂತ್ರಿಯವರು).—

ಅ) ಆ) ಇ) ಅನೌನ್ಸರ್ (ಘೋಷಕ) ಎಂಬ ಹುದ್ದೆಗಳು ಅಸ್ತಿತ್ವದಲ್ಲಿರುವುದಿಲ್ಲ. ಆದಾಗ್ಯೂ ಕೆಲವು ಸಹಾಯಕರನೇಮಯನ್ನು ಈ ಕಾರ್ಯಕ್ಕಾಗಿ ಪಬ್ಲಿಕ್ ಅಡ್ರೆಸ್ ಪದ್ಧತಿ ಇರುವ ಎ ಮತ್ತು ಬಿ ನಿಲ್ದಾಣಗಳಲ್ಲಿ ಉಪಯೋಗಿಸಲಾಗುತ್ತಿದೆ.

ಬೀದರ್ ಜಿಲ್ಲಾ ಪರಿಷತ್‌ಗೆ ನಿಗದಿಗೊಳಿಸಲಾದ ಹಣ

೨೬೪. ಶ್ರೀ ನಾರಾಯಣರಾವ್ ಮನ್ನಹಳ್ಳಿ (ಬೀದರ್).—ಮಾನ್ಯ ಹಣಕಾಸು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮಾನ್ಯ ಆರ್ಥಿಕ ಸಚಿವರು ಜಿಲ್ಲಾ ಪರಿಷತ್ ಬೀದರ್‌ಗೆಂದು ಈ ಕೆಳಗೆ ತಿಳಿಸಿದ ಕೆಲಸಗಳಿಗೆ ೧೯೮೬-೮೮ ಮತ್ತು ೧೯೮೯-೯೦ನೇ ಸಾಲಿಗೆ ಹಾಗೂ ೧೯೯೦ ಫೆಬ್ರುವರಿ ಅಂತ್ಯದವರೆಗೆ ಒದಗಿಸಿರುವ ಅನುದಾನವೆಷ್ಟು ಎಂದು ತಿಳಿಸುವರೆ?

೧) ರಸ್ತೆ ಮತ್ತು ಸೇತುವೆಗಳು

೨) ಸಣ್ಣ ನೀರಾವರಿ ಕೆರೆಗಳು

೩) ನೀರು ಪೂರೈಕೆ ಮತ್ತು ನೈರ್ಮಲ್ಯ (ಪಿ. ಹೆಚ್. ಇ.)

೪) ಕಟ್ಟಡಗಳು.